**All India Radio: Bangalore**
**National Bulletins In Kannada**
**26.08.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<><*<><>*><>

ಮುಖ್ಯಾಂಶಗಳು

೧. ಅಹ್ಮದಾಬಾದ್‌ನಲ್ಲಿಂದು ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ

೨. ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ಪುನರುಚ್ಚರಿಸಿದ ಭಾರತ ಮತ್ತು ಫಿಜಿ

೩. ವಿಶಾಖಪಟ್ಟಣದಲ್ಲಿಂದು ನೂತನ ಸುಧಾರಿತ ಐಎನ್‌ಎಸ್ ಉದಯಗಿರಿ ಮತ್ತು ಹಿಮಗಿರಿ ಕಾರ್ಯಾರಂಭ

೪. ಬಿಹಾರದಲ್ಲಿ ವಿಶೇಷ ಮತದಾರ ಪಟ್ಟಿ ಪರಿಶೀಲನೆ; ಶೇಕಡ ೯೯ ರಷ್ಟು ಮತದಾರರಿಂದ ದಾಖಲೆಗಳ ಸಂಗ್ರಹ

೫. ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್; ಭಾರತದ ಹೆಚ್.ಎಸ್. ಪ್ರಣಯ್ ಇಂದು ಅಭಿಯಾನ ಆರಂಭ

><><><><><><><><

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಅಹ್ಮದಾಬಾದ್‌ನ ಹನ್ಸಲ್ಪುರದಲ್ಲಿ ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಲಿದ್ದಾರೆ ಹಾಗೂ ೧೦೦ ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಎಲೆಕ್ಟ್ರಿಕ್ ಬ್ಯಾಟರಿ ವಾಹನಗಳ ರಫ್ತಿಗೆ ಹಸಿರು ನಿಶಾನೆ ತೋರಲಿದ್ದಾರೆ. ಪ್ರಧಾನಿ ಸುಜುಕಿಯ ಮೊದಲ ಜಾಗತಿಕ ಕಾರ್ಯತಂತ್ರದ ಬ್ಯಾಟರಿ ಎಲೆಕ್ಟ್ರಿಕ್ ವಾಹನ 'ಇ ವಿಟಾರಾ'ದ ಉದ್ಘಾಟನೆ ನೆರವೇರಿಸಿ, ಅದರ ರಫ್ತಿಗೆ ಹಸಿರು ನಿಶಾನೆ ತೋರಲಿದ್ದಾರೆ. ಭಾರತದಲ್ಲಿ ತಯಾರಾಗುವ ಇ-ವಾಹನಗಳನ್ನು ಯುರೋಪ್, ಜಪಾನ್ ಸೇರಿದಂತೆ ೧೦೦ಕ್ಕೂ ಹೆಚ್ಚು ರಾಷ್ಟ್ರಗಳಿಗೆ ರಫ್ತು ಮಾಡಲಾಗುವುದು. ಇದರೊಂದಿಗೆ, ಭಾರತವು ಸುಜುಕಿ ಸಂಸ್ಥೆಯ ಎಲೆಕ್ಟ್ರಿಕ್ ವಾಹನಗಳ ಜಾಗತಿಕ ತಯಾರಿಕಾ ಕೇಂದ್ರವಾಗಿ ಹೊರಹೊಮ್ಮಲಿದೆ. ತೋಶಿಬಾ, ಡೆನ್ಸೋ ಮತ್ತು ಸುಜುಕಿ ಸಹಭಾಗಿತ್ವದ ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಉತ್ಪಾದನಾ ಘಟಕ ದೇಶೀಯ ಉತ್ಪಾದನೆ ಮತ್ತು ಶುದ್ಧ ಇಂಧನದಲ್ಲಿ ನಾವೀನ್ಯತೆಗೆ ಬಲ ನೀಡಲಿದೆ. ನಿನ್ನೆ ಅಹ್ಮದಾಬಾದ್‌ನ ಖೋದಲಧಾಮ ಮೈದಾನದಲ್ಲಿ ೫ ಸಾವಿರದ ೪೦೦ ಕೋಟಿ ರೂಪಾಯಿ ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ ಮಾತನಾಡಿದ ಪ್ರಧಾನಿ, ದೇಶಕ್ಕೆ ಕೃಷಿಕರು, ಪಶುಪಾಲಕರು ಮತ್ತು ಸಣ್ಣ ಉದ್ಯಮಿಗಳ ಹಿತಾಸಕ್ತಿ ಪ್ರಮುಖವಾಗಿದೆ. ದೇಶದ ಪ್ರತಿಯೊಂದು ಸಮುದಾಯದ ವ್ಯಕ್ತಿಗೂ ಗೌರವಯುತ ಬದುಕು ಸಾಗಿಸಲು

ಸರ್ಕಾರ ಬದ್ಧವಿದೆ. ನಗರದಲ್ಲಿ ವಾಸಿಸುವ ಬಡಜನರ ಬದುಕು ಸುಲಭಗೊಳಿಸುವುದು ಸರ್ಕಾರದ ಪ್ರಾಥಮಿಕ ಗುರಿಯಾಗಿದೆ ಎಂದರು. ೨೦೪೭ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವುದು ತಮ್ಮ ಗುರಿಯಾಗಿದ್ದು, ಪ್ರತಿ ನಾಗರಿಕನು 'ಮೇಡ್ ಇನ್ ಇಂಡಿಯಾ' ಉತ್ಪನ್ನಗಳಿಗೆ ಆದ್ಯತೆ ನೀಡಬೇಕು ಮತ್ತು ತಯಾರಕರು ಉತ್ಪನ್ನದ ಗುಣಮಟ್ಟವನ್ನು ಹೆಚ್ಚಿಸಬೇಕು ಎಂದು ಪ್ರಧಾನಿ ಕರೆ ನೀಡಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (  ೨೨ ಸೆಕೆಂಡುಗಳು)

><><><><><><><

ಭಾರತ ಮತ್ತು ಫಿಜಿ ಭಯೋತ್ಪಾದನೆ ಬಗ್ಗೆ ದ್ವಂದ್ವ ನೀತಿಗಳನ್ನು ತಿರಸ್ಕರಿಸಿ, ಶೂನ್ಯ ಸಹಿಷ್ಣುತೆಯ ನಿಲುವನ್ನು ಪುನಃ ದೃಢಪಡಿಸಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಫಿಜಿ ಪ್ರಧಾನಮಂತ್ರಿ ಸಿತಿವೇನಿ ರಬುಕಾ ನಡುವಿನ ದ್ವಿಪಕ್ಷೀಯ ಚರ್ಚೆಯ ವೇಳೆ ಉಭಯ ನಾಯಕರು ಭಯೋತ್ಪಾದನೆಯ ಎಲ್ಲಾ ರೂಪಗಳನ್ನೂ ಖಂಡಿಸಿ, ಪರಸ್ಪರ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಒಪ್ಪಿಕೊಂಡರು. ಪಹಲ್ಗಾಂ ಉಗ್ರ ದಾಳಿಯನ್ನು ಉಭಯ ನಾಯಕರು ತೀವ್ರವಾಗಿ ಖಂಡಿಸಿದ್ದು, ಅಂತಹ ಚಟುವಟಿಕೆಗಳಿಗೆ ತಡೆ ನೀಡುವುದು, ಅದಕ್ಕೆ ಪೂರಕ ಹಣಕಾಸು ಸರಪಳಿಯನ್ನು ಮುರಿದು ಹಾಕುವುದು, ತಂತ್ರಜ್ಞಾನಗಳ ದುರುಪಯೋಗವನ್ನು ತಡೆಯುವುದು ಮತ್ತು ಭಯೋತ್ಪಾದಕ ಸಂಘಟನೆಗಳಿಗೆ ಸೇರ್ಪಡೆಯನ್ನು ತಡೆಗಟ್ಟುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

><><><><><><><

ಭಾರತೀಯ ನೌಕಾಪಡೆ ವಿಶಾಖಪಟ್ಟಣದಲ್ಲಿಂದು ತನ್ನ ನೂತನ ಸುಧಾರಿತ ಸ್ಟೆಲ್ತ್ ಯುದ್ಧ ನೌಕೆಗಳಾದ ಐಎನ್‌ಎಸ್ ಉದಯಗಿರಿ ಮತ್ತು ಐಎನ್‌ಎಸ್ ಹಿಮಗಿರಿ ಯನ್ನು ಅಧಿಕೃತವಾಗಿ ಕಾರ್ಯಾರಂಭಗೊಳಿಸಲು ಸಜ್ಜಾಗಿದೆ. ಈ ಪಿ-೧೭-ಎ ಯುದ್ಧ ನೌಕೆಗಳು ಸುಮಾರು ೬ ಸಾವಿರದ ೭೦೦ ಟನ್ ತೂಕ ಹೊಂದಿದ್ದು, ಈ ಮೊದಲಿನ ಶಿವಾಲಿಕ್ ವರ್ಗದ ಹಡಗುಗಳಿಗಿಂತ ಸ್ವಲ್ಪ ದೊಡ್ಡ ಗಾತ್ರದ್ದಾಗಿವೆ. ಇವುಗಳಲ್ಲಿ ರೆಡಾರ್ ಪತ್ತೆ ತಡೆಯುವ ನವೀನ ಹಲ್ ವಿನ್ಯಾಸವಿದೆ. ಕಾರ್ಯಾರಂಭ ಸಮಾರಂಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿಶಾಖಪಟ್ಟಣದಲ್ಲಿ ನಡೆಯಲಿರುವ ಈ ಉದ್ಘಾಟನಾ ಕಾರ್ಯಕ್ರಮ ಭಾರತದ ಸ್ವಾವಲಂಬಿ ಕಡಲ ರಕ್ಷಣಾ ಮೂಲಸೌಕರ್ಯ ನಿರ್ಮಾಣದ ದಿಕ್ಕಿನಲ್ಲಿ ಸಾಧಿಸಿರುವ ಪ್ರಗತಿಯನ್ನು ಪ್ರಶಂಸಿಸುವ ಕ್ಷಣವಾಗಿದೆ. ಐಎನ್‌ಎಸ್ ಉದಯಗಿರಿ ಮತ್ತು ಐಎನ್‌ಎಸ್ ಹಿಮಗಿರಿ, ಪ್ರಾಜೆಕ್ಟ್ ೧೭ ಶಿವಾಲಿಕ್ ವರ್ಗದ ಮುಂದುವರಿದ ಹಡಗುಗಳಾಗಿದ್ದು, ವಿನ್ಯಾಸ, ಸಾಮರ್ಥ್ಯ, ಆಯುಧ ಮತ್ತು ಸಂವೇದಕ ವ್ಯವಸ್ಥೆಗಳ ಸುಧಾರಣೆಗಳೊಂದಿಗೆ ಕಡಲ ರಕ್ಷಣೆಯ ಎಲ್ಲಾ ವಿಧದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಸಜ್ಜಾಗಿವೆ. ಐಎನ್‌ಎಸ್ ಉದಯಗಿರಿಯನ್ನು ಮುಂಬೈಯ ಮಜಗಾಂ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್, ಮತ್ತು ಐಎನ್‌ಎಸ್ ಹಿಮಗಿರಿಯನ್ನು ಕೋಲ್ಕತ್ತಾದ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಹಾಗೂ  ಎಂಜಿನಿಯರ್ಸ್ ಸಂಸ್ಥೆಗಳು ಅಭಿವೃದ್ಧಿಪಡಿಸಿವೆ. ಈ ಎರಡು ಹಡಗುಗಳ

ನಿರ್ಮಾಣದಲ್ಲಿ ೨೦೦ ಕ್ಕೂ ಹೆಚ್ಚು ಅತೀಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಪಾಲ್ಗೊಂಡಿದ್ದು, ಇವುಗಳಿಂದಾಗಿ ಸುಮಾರು ೪ ಸಾವಿರ ನೇರ ಉದ್ಯೋಗಗಳು ಮತ್ತು ೧೦ ಸಾವಿರ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ.

><><><><><><><><

ಬಿಹಾರದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಶೀಲನೆ ಅಡಿಯಲ್ಲಿ, ಶೇಕಡ ೯೯.೧೧ ರಷ್ಟು ಮತದಾರರಿಂದ ದಾಖಲೆಗಳನ್ನು ಈಗಾಗಲೇ ಪಡೆದುಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಸೆಪ್ಟೆಂಬರ್ ೧ ರ ವೇಳೆಗೆ ಈ ಪ್ರಕ್ರಿಯೆ ಪೂರ್ಣಗೊಳ್ಳಬೇಕಿದ್ದರೂ ಈಗಾಗಲೇ ದಿನಕ್ಕೆ ಸರಾಸರಿ ಶೇಕಡ ೧.೬೪ ರಷ್ಟು ಮತದಾರರ ದಾಖಲಾತಿ ಸಂಗ್ರಹ ಮಾಡಲಾಗುತ್ತಿದೆ. ಇನ್ನು ಕೇವಲ ಶೇಕಡ ೦.೮೯ ರಷ್ಟು ಮತದಾರರಿಂದ ದಾಖಲೆ ಸಂಗ್ರಹ ಬಾಕಿ ಇದ್ದು, ಬೂತ್ ಮಟ್ಟದ ಅಧಿಕಾರಿಗಳು ಹಾಗೂ ಸ್ವಯಂಸೇವಕರ ಸಹಕಾರದಿಂದ ಈ ಪ್ರಕ್ರಿಯೆಯನ್ನು ಗಡುವಿನ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಆಯೋಗ ಭರವಸೆ ನೀಡಿದೆ.

><><><><><><><><

ಕೇಂದ್ರ ಹಣಕಾಸು ಸಚಿವಾಲಯವು ಹೊಸದಾಗಿ ಪರಿಚಯಿಸಿದ ಏಕೀಕೃತ ಪಿಂಚಣಿ ಯೋಜನೆಯಿಂದ ರಾಷ್ಟ್ರೀಯ ಪಿಂಚಣಿ ಯೋಜನೆಗೆ ವರ್ಗಾಯಿಸಿಕೊಳ್ಳಲು ಒಂದು ಬಾರಿಗೆ ಅವಕಾಶ ನೀಡಿದೆ. ಅಧಿಕೃತ ಅಧಿಸೂಚನೆಯ ಪ್ರಕಾರ ಯುಪಿಎಸ್ ಚಂದಾದಾರರು ತಮ್ಮ ವಯೋನಿವೃತ್ತಿಯ ಒಂದು ವರ್ಷ ಮುಂಚಿತವಾಗಿ, ಸ್ವಯಂ ನಿವೃತ್ತಿ ಘೋಷಿಸಿಕೊಳ್ಳುವವರಿಗೆ ೩ ತಿಂಗಳ ಮುಂಚಿತವಾಗಿ ಈ ಸೌಲಭ್ಯ ಲಭ್ಯವಿರುತ್ತದೆ.  ನೌಕರರ ಅಮಾನತು ಅಥವಾ ಶಿಸ್ತು ಕ್ರಮ ಮುಂತಾದವುಗಳಿಗೆ ಇದು ಅನ್ವಯಿಸುವುದಿಲ್ಲ. ಕೇಂದ್ರ ಸರ್ಕಾರವು ೨೦೨೫ರ ಏಪ್ರಿಲ್ ೧ರಿಂದ ರಾಷ್ಟ್ರೀಯ ಪಿಂಚಣಿ ಯೋಜನೆಯಡಿಯಲ್ಲಿ ಏಕೀಕೃತ ಪಿಂಚಣಿ ಯೋಜನೆ - ಯುಪಿಎಸ್ ಅನ್ನು ಪರಿಚಯಿಸಿತ್ತು. ಈ ಯೋಜನೆಗೆ ಜುಲೈ ೨೦ರವರೆಗೆ ೩೧ ಸಾವಿರದ ೫೫೫ ಕೇಂದ್ರ ಸರ್ಕಾರಿ ನೌಕರರು ನೋಂದಾಯಿಸಿಕೊಂಡಿದ್ದಾರೆ. ಸೆಪ್ಟೆಂಬರ್ ೩೦ ಈ ಯೋಜನೆಯಡಿಯಲ್ಲಿ ನೋಂದಾಯಿಸಿಕೊಳ್ಳಲು ಕೊನೆಯದಿನವಾಗಿರುತ್ತದೆ.

><><><><><><><><

ಸರದಾರ್ ವಲ್ಲಭಭಾಯ್ ಪಟೇಲ್ ಅವರ ೧೫೦ನೇ ಜನ್ಮ ದಿನಾಚರಣೆ, ಆದಿವಾಸಿ ನಾಯಕ ಬಿರ್ಸಾ ಮುಂಡ ಅವರ ಜನ್ಮವಾರ್ಷಿಕೋತ್ಸವ  ಅಟಲ್ ಬಿಹಾರಿ ವಾಜಪೇಯ್ ಅವರ ಜನ್ಮ ಶತಮಾನೋತ್ಸವದ ಪ್ರಯುಕ್ತ ೩ ಉನ್ನತ ಮಟ್ಟದ ಸಮಿತಿಗಳನ್ನು ರಚಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.  ಈ ಮೂರು ಸಮಿತಿಗಳಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಧ್ಯಕ್ಷರಾಗಿರುತ್ತಾರೆ. ಸಮಿತಿಯು ಮೂವರು ಮಹಾನ್ ನಾಯಕರುಗಳ ಜೀವನ, ಸಾಧನೆ ಕುರಿತ ಕಾರ್ಯಕ್ರಮಗಳನ್ನು ದೇಶಾದ್ಯಂತ ಆಯೋಜಿಸಲು ಸೂಕ್ತ ನಿರ್ದೇಶನ ನೀಡಲಿದೆ. ವಲ್ಲಭಭಾಯ್

ಪಟೇಲ್ ಅವರು,  ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಮಹಾನ್ ನಾಯಕರಲ್ಲಿ ಒಬ್ಬರಾಗಿದ್ದು ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ದೇಶದ ಸುಮಾರು ೫೬೫ ರಾಜಸಂಸ್ಥಾನಗಳನ್ನು ಭಾರತ ದೇಶದೊಳಗೆ ವಿಲೀನಗೊಳಿಸಲು ಪರಿಶ್ರಮಿಸಿದರು. ಹಾಗೆಯೇ ಬಿರ್ಸಾ ಮುಂಡ ಬ್ರಿಟಿಷರ ವಿರುದ್ಧ ಆದಿವಾಸಿ ಜನರನ್ನು ಒಗ್ಗೂಡಿಸಿ ಹೋರಾಟ ಮಾಡಲು ಪ್ರೇರೆಪಿಸಿದ ಮಹಾನ್ ಹೋರಾಟಗಾರ. ಅಟಲ್‌ಬಿಹಾರಿ ವಾಜಪೇಯ್ ಅವರು, ರಾಜಕೀಯ ಮುತ್ಸದ್ಧಿ, ಕವಿ, ವಾಗ್ಮಿ, ಬರಹಗಾರರಾಗಿ ದೇಶಸೇವೆ ಸಲ್ಲಿಸಿದ ಮಹಾಪುರುಷರಾಗಿದ್ದಾರೆ. ಇಂತವರ ಸ್ಮರಣಾರ್ಥ ದೇಶಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

><><><><><><><

ಭಾರತದ ಬ್ಯಾಡ್ಮಿಂಟನ್ ಆಟಗಾರ ಹೆಚ್.ಎಸ್.ಪ್ರಣಯ್ ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿಂದು ತಮ್ಮ ಮೊದಲ ಪಂದ್ಯವನ್ನಾಡಲಿದ್ದಾರೆ. ಫಿನ್‌ಲ್ಯಾಂಡ್‌ನ ಜೋಕಿಮ್ ಓಲ್ಡಾರ್ಫ್ ವಿರುದ್ಧ ಅವರು ಮೊದಲ ಸುತ್ತಿನ ಪಂದ್ಯ ಎದುರಿಸಲಿದ್ದಾರೆ. ಮತ್ತೋರ್ವ ಶಟ್ಲರ್ ಲಕ್ಷ್ಯ ಸೇನ್ ಈಗಾಗಲೇ ಟೂರ್ನಿಯಿಂದ ಹೊರಬಿದ್ದಿದ್ದಾರೆ.

><><><><><><><

ಬಿಸಿಸಿಐ ತನ್ನ ಪ್ರಮುಖ ಪ್ರಾಯೋಜಕ ಡ್ರೀಮ್ ೧೧ ಜೊತೆಗಿನ ೩೫೮ ಕೋಟಿ ರೂಪಾಯಿಗಳ ಒಪ್ಪಂದ ರದ್ದುಗೊಳಿಸಿದೆ.   ಆನ್‌ಲೈನ್ ಗೇಮಿಂಗ್ ನಿಯಂತ್ರಣ ಮಸೂದೆಯಿಂದಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ.  ಬಿಸಿಸಿಐ ಇನ್ನು ಮುಂದೆ ಇಂತಹ ಕಂಪನಿಗಳೊಂದಿಗೆ ಕೆಲಸ ಮಾಡುವುದಿಲ್ಲ ಎಂದು ಘೋಷಿಸಿದೆ.  ಈ ನಿರ್ಧಾರದಿಂದ ಏಷ್ಯಾ ಕಪ್‌ಗೂ ಮುನ್ನ ಹೊಸ ಪ್ರಾಯೋಜಕರನ್ನು ಬಿಸಿಸಿಐ ಕಂಡುಕೊಳ್ಳಬೇಕಾಗಿದೆ  ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದ್ದಾರೆ.   ಡ್ರೀಮ್ ೧೧ ಪ್ರಮುಖ ಪ್ರಾಯೋಜಕ ಕಂಪನಿಯಾಗಿದ್ದು, ಜುಲೈ ೨೦೨೩ ರಲ್ಲಿ ೩೫೮ ಕೋಟಿ ರೂಪಾಯಿ ಮೌಲ್ಯದ, ಮೂರು ವರ್ಷಗಳ ಒಪ್ಪಂದಕ್ಕೆ ಬಿಸಿಸಿಐ ಸಹಿ ಹಾಕಿತ್ತು.

><><><><><><><